**ದಿನಾಂಕ 05.07.2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಡಿ.ಎಸ್.ಕೆ. ವಕೀಲರಿಂದಃ**

1. ನಾನು 10 ನೇ ತರಗತಿ ಅನುತ್ತೀರ್ಣವಾಗಿರುತ್ತೇನೆ. ದಾವಾ ಸ್ವತ್ತು ಸರ್ವೆ ನಂ.229/1. ನನ್ನ ಜಮೀನು ಸರ್ವೆ ನಂ. 229/2 ಆಗಿದೆ. ಸದರಿ ಜಮೀನನ್ನು ನನ್ನ ತಂದೆ ಕೊಂಡುಕೊಂಡಿದ್ದರು. ಸರ್ವೆ ನಂ. 229/2 ನನ್ನ ತಂದೆಯವರು ಕೊಂಡಂತಹ ಜಮೀನು ಎಂದು ಹೇಳುವುದಕ್ಕೆ ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಲು ನನಗೆ ಏನು ತೊಂದರೆ ಇಲ್ಲ. ಸರ್ವೆ ನಂ. 226 ನನ್ನ ಪಿತ್ರಾರ್ಜಿತ ಆಸ್ತಿ ಆಗಿದೆ. ಸರ್ವೆ ನಂ. 229/1 ರಲ್ಲಿ ರಸ್ತೆಯ ಪಶ್ಚಿಮಕ್ಕೆ ಸರ್ವೆ ನಂ. 226 ರ ಜಮೀನು ಇದೆ ಎಂದರೆ ಸರಿ. ವಾದಿ ಸರ್ವೆ ನಂ. 226/2 ರ ಜಮೀನನ್ನು ನಾನೇ ಕೊಂಡುಕೊಂಡಿರುತ್ತೇನೆ ಎಂದರೆ ಸರಿಯಲ್ಲ, ನನ್ನ ತಂದೆ ಕೊಂಡುಕೊಂಡಿರುತ್ತಾರೆ. ಸದರಿ ಜಮೀನಿನ ಕ್ರಯ ಪತ್ರ ಹಾಜರುಪಡಿಸಿದ್ದಲ್ಲಿ ಸತ್ಯ ಗೊತ್ತಾಗುತ್ತದೆ ಎಂದು ನಾನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.226/2 ರ ಪಶ್ಚಿಮಕ್ಕೆ ಚಿಕ್ಕಬಾಲಪ್ಪನವರ ಜಮೀನು ಇದೆ ಎಂದು ನಮೂದಾಗಿದೆ ಎಂದರೆ ಸರಿ.
2. ನಿ.ಪಿ.2 ರ ದಾಖಲಾತಿಯಲ್ಲಿ ರಸ್ತೆ ತೋರಿಸಲಾಗಿದ್ದು ಅದರಲ್ಲಿ ಎರಡು ಜಮೀನು ನನಗೆ ಸಂಬಂಧಪಟ್ಟಿದ್ದು ಹಾಗೂ ಪೂರ್ವಕ್ಕೆ ಚಿಕ್ಕಪಾದಪ್ಪನವರ ಜಮೀನು ಇದೆ ಎಂದರೆ ಸರಿ. ಸದರಿ ಜಾಗವನ್ನು ಒತ್ತುವರಿಮಾಡಿಕೊಂಡು ವಾದಿಯವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಾಗದ ದಕ್ಷಿಣ ದಿಕ್ಕಿನಲ್ಲಿ ಹೇಮಾವತಿ ಕಾಲುವೆ ಇದೆ ಎಂದರೆ ಸಾಕ್ಷಿಯು ಅಡ್ಡಡ್ಡ ಹಾದು ಹೋಗಿದೆ ಎಂದು ನುಡಿಯುತ್ತಾರೆ. ಹೇಮಾವತಿ ಕಾಲುವೆ ಹಾದು ಹೋಗುವ ಜಾಗದ ಹಣವನ್ನು ವಾದಿಯೇ ತೆಗೆದುಕೊಂಡಿದ್ದಾರೆ ಎಂದರೆ ಸರಿ.

**ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**